ದಿನಾಂಕಃ-17-02-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ-ಶ್ರೀ.ಸಿ ಎಸ್ ಎ ವಾದಿ ಪರ ವಕೀಲರಿಂದಃ-

ನನಗೆ 34 ವರ್ಷ ವಯಸ್ಸು. ನಾನು ಕಲಾ ವಿಭಾಗದಲ್ಲಿ ಪದವಿದರನಿದ್ದೇನೆ. ನನ್ನ ತಾಯಿಯ ವಯಸ್ಸು ಸುಮಾರು 48 ವರ್ಷ. ನಮ್ಮ ತಾಯಿಯ ಆರೋಗ್ಯ ಚೆನ್ನಾಗಿದೆ ಎಂದರೆ ಸರಿಯಲ್ಲ. ಅವರಿಗೆ ಹೃದ್ರೋಗ ಕಾಯಿಲೆ ಇದೆ. ವಿಜಯಪುರದ ಬಿದರಿ ಆಸ್ಪತ್ರೆಯಲ್ಲಿ ನಮ್ಮ ತಾಯಿಗೆ ಚಿಕಿತ್ಸೆ ಕೊಡಿಸಿದ್ದೇನೆ. ಬಿದರಿ ಆಸ್ಪತ್ರೆ ಮಕ್ಕಳಿಗೆ ಸಂಬಂಧಿಸಿದ ಆಸ್ಪತ್ರೆ ಎಂದರೆ ಸರಿಯಲ್ಲ. ನಾನು ಬಿದರಿ ಆಸ್ಪತ್ರೆಯಲ್ಲಿ  ಗೌತಮ ವಗ್ಗರರವರ ಹತ್ತಿರ ತೋರಿಸಿದ್ದೇನೆ. ನಮ್ಮ ತಾಯಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಅದರ ಬಗ್ಗೆ ದಾಖಲಾತಿ ಹಾಜರಪಡಿಸಲು ಯಾವುದೇ ತೊಂದರೆ ಇಲ್ಲ. ಕೈಪಿಯತ ಈ ಪ್ರಕರಣಕ್ಕೆ ನಮ್ಮ ತಾಯಿ ಸಲ್ಲಿಸಿದ್ದಾರೆ. ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಕೈಪಿಯತ ಸಲ್ಲಿಸುವ ಕಾಲಕ್ಕೆ ನಾನು ಮೊಕ್ತಿಯಾರ ಪತ್ರ ಪಡೆದುಕೊಂಡಿರಲಿಲ್ಲ. ಸದರಿ ತಕರಾರು ಪತ್ರಕ್ಕೆ ನನ್ನ ಸಹಿ ಮಾಡಿದ್ದಾರೆ. ನನ್ನ ತಾಯಿಯ ವಿರುದ್ದ ಕ್ರಿಮಿನಲ್ ಪ್ರಕರಣ ಇದ್ದು ಅವರು ಹಾಜರಾಗುತ್ತಾರೆ ಎಂದರೆ ಸರಿ. ಸದರಿ ಕ್ರಿಮಿನಲ ಪ್ರಕರಣ ನಡೆದು 4 ವರ್ಷಗಳು ಆಯಿತು.  ಸುಶೀಲಾಬಾಯಿ ಸಹಿಯನ್ನು ನಾನು ಖೊಟ್ಟಿಯಾಗಿ ಮಾಡಿದ್ದೇನೆ ಅಂತಾ ಕೇಸು ಇದೆ ಎಂದರೆ ಸರಿಯಲ್ಲ. ನಮ್ಮ ತಾಯಿ ಸಾಕ್ಷಿ ನುಡಿಯಲು ಬಂದರೆ ಸತ್ಯ ಬಯಲಾಗುತ್ತದೆ ಎಂದು ಖೊಟ್ಟಿ ಮೊಕ್ತಿಯಾರ ಪತ್ರ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.  ಮೃತ್ಯು  ಪತ್ರ ಈ ಪ್ರಕರಣದಲ್ಲಿ ಹಾಜರಪಡಿಸಿದೇನೆ. ನಿಡಿ-1 ರಲ್ಲಿ ಇರುವ ಸಹಿಗಳು ಸುಶೀಲಾಬಾಯಿಯದು ಅಲ್ಲ ಎಂದರೆ ಸರಿಯಲ್ಲ.

2. ಸದರಿ ನಿಡಿ-1 ರ ಮೇಲೆ ಇರುವ ಸಾಕ್ಷಿಗಳ ಸಹಿಗಳು ಖೊಟ್ಟಿ ಸಹಿಗಳು ಅಂದರೆ ಸರಿಯಲ್ಲ. ಸಾಕ್ಷಿಯು ಉಪನೊಂದಣಾ ಕಚೇರಿಯಲ್ಲಿ ಮಾಡಿದ ಸಹಿಗಳು ಅಂತಾ ಹೇಳುತ್ತಾರೆ. ಸುಶೀಲಾಬಾಯಿಯವರಿಗೆ ಪಾರ್ಶ್ವವಾಯು ಇತ್ತು ಎಂದರೆ ಸರಿ. ನಿಡಿ-1 ಆದ ತಾರೀಖನಂದು ದಸ್ತೂರರವರ ಮುಂದೆ ಹಾಜರಿದ್ದರು ಎಂದರೆ ಸರಿಯಲ್ಲ.

3. ಸುಶೀಲಾಬಾಯಿಯವರು ಆಗ ಹಾಜರ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ-1 ಆಗಿದೆ ಎಂದು ಬರೆದ ದಿನಾಂದಂದು ಸುಶೀಲಾಬಾಯಿಯವರಿಗೆ 60 ವರ್ಷ ವಯಸ್ಸು ಇತ್ತು. ನಾನು ಆ ಸಮಯದಲ್ಲಿ ಹಾಜರ ಇರಲಿಲ್ಲ. ಸುಲಾಬಾಯಿ ಜೀವಂತ ಇರುವಾಗ ನಿಡಿ-1 ನ್ನು ಯಾವುದಕ್ಕಾಗಿ ನೋಂದಣಿ ಮಾಡಿಸಿಲ್ಲ ಎಂದರೆ ಸಾಕ್ಷಿಯು ದುಸ್ತೂರರವರು ಬೇಡ ಎಂದ ಕಾರಣಕ್ಕೆ ಮಾಡಿಸಿಲ್ಲ ಎಂದು ಹೇಳುತ್ತಾರೆ. ನಿಡಿ-1 ಆದ ನಂತರ 3 ವರ್ಷದವರೆಗೆ ಸುಶೀಲಾಬಾಯಿ ಜೀವಂತ ಇದ್ದಾರೆ. ಸುಶೀಲಾಬಾಯಿ ಮರಣಾನಂತರ ನೊಂದಣಾವಣಿ ಮಾಡಿಸಬೇಕೆಂದು ಆಕೆಯ ಮರಣಾನಂತರ ಉಪನೊಂದಣಾದಿಕಾರಿಗೆ ಕೇಳಿದಾಗ ಅವರು ಮಾಡಿಸಬೇಕೇಂದು ಹೇಳಿದರು. ಸುಶೀಲಾಬಾಯಿ ಮರಣಾನಂತರ ನಿಡಿ-1 ನ್ನು ಖೊಟ್ಟಿಯಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಸುಶೀಲಾಬಾಯಿ ಅವರ ಆರೋಗ್ಯ ಸರಿ ಇಲ್ಲದೆ ಇರುವಾಗ ಪ್ರತಿವಾದಿ-1 ಸುಶೀಲಾಬಾಯಿಯನ್ನು ಎಸ್.ಡಿ.ಎಮ್ ಧಾರವಾಡದಲ್ಲಿ ದಾಖಲ ಮಾಡಿದರು ಎಂದರೆ ಸಾಕ್ಷಿಯು ಅವರು ಮಾಡಿರಲಿಲ್ಲ ನಾನು ಮಾಡಿದ್ದೇನೆ ಎಂದು ಹೇಳತ್ತಾರೆ. ಅದರ ಬಿಲ್ಲನ್ನು ಪ್ರತಿವಾದಿ-1 ಪಾವತಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನಾನು ಮಾಡಿದ್ದೇನೆ ಎಂದು ಹೇಳುತ್ತಾರೆ.

4. ನಿಡಿ-1 ತಜ್ಞರಿಗೆ ಉಲ್ಲೇಖಿಸಲಾಗಿದ್ದು ಅವರ ಅಭಿಪ್ರಾಯ ಇರುವ ಅಂಶವನ್ನು ನಾನು ನೋಡಿ ತಿಳಿದುಕೊಂಡಿದ್ದೇನೆ. ಸದರಿ ವರದಿ ಈ ಪ್ರಕರಣದಲ್ಲಿ ಹಾಜರಪಡಿಸಿದ್ದೇನೆ. ವರದಿ ಅನ್ವಯ ನಿಡಿ-1 ರಲ್ಲಿ ಪ್ರತಿವಾದಿ-1 ರ ಸಹಿ ಇಲ್ಲ ಎಂದರೆ ಸರಿಯಲ್ಲ. ಮೃತ ಸುಶೀಲಾಬಾಯಿ ಇವರ ಸಹಿಗೂ ಮತ್ತು ನಿಡಿ-1 ರಲ್ಲಿ ಸುಶೀಲಾಬಾಯಿ ಸಹಿಗೂ ತಾಳೆ ಹೊಂದುವುದಿಲ್ಲ ಎಂದರೆ ಸರಿ. ದಾವಾ ಐಟಂ 1 ನೇ ಸ್ವತ್ತಿನಲ್ಲಿ ಪ್ರಶಾಂತ ಹೊಟೇಲ ಇತ್ತು ಎಂದರೆ ಸರಿ. ಪ್ರಶಾಂತ ಹೊಟೇಲಗೆ ಸಂಬಂಧಿಸಿದಂತೆ ಪಾಲುದಾರಿಕೆ ಒಪ್ಪಂದ ಇದೆ ಎಂದರೆ ಸರಿ. ಸದರಿ ಪಾಲೂದಾರಿಕೆಯ ಸಂಸ್ಥೆಯಲ್ಲಿ ಪ್ರಶಿವಾದಿ-1 ಮತ್ತು 4 ರವರು ಪಾಲುದಾರರು ಎಂದರೆ ಸರಿ. ಪಾಲುದಾರಿಕೆ ಬಗ್ಗೆ ಇದ್ದ ಒಪ್ಪಂದ ಪತ್ರ ನೋಡಿದ್ದೇನೆ.

5. ನಾನು ಪಾಲುದಾರಿಕೆ ಸಂಸ್ಥೆಗೆ ಸಂಬಂಧಿಸಿದ ಒಪ್ಪಂದ ಪತ್ರಗಳನ್ನು ನೋಡಿದಾಗ ಅದರಲ್ಲಿ ಸುಶೀಲಾಬಾಯಿ ಮತ್ತು ಜಯವಂತ ಮಾತ್ರ ಇದ್ದರು. ಪಾಲುದಾರಿಕೆ ಸಂಸ್ಥೆಯ ಒಪ್ಪಂದ ಪತ್ರ ನೋಡಿದಾಗ ನನಗೆ ಗೊತ್ತು. ಸುಶೀಲಾಬಾಯಿ ಮೃತಳಾದ ನಂತರ 1 ನೇ ಪ್ರತಿವಾದಿ ಮತ್ತು 4 ನೇ ಪ್ರತಿವಾದಿ ಪಾಲು ವಾಟ್ನಿ ಮಾಡಿಕೊಂಡರು ಎಂದರೆ ಸರಿ. ಸದರಿ ಪಾಲುದಾರಿಕೆ ಒಪ್ಪಂದ ದಿಃ19-09-1985 ರಂದು ಆಗಿದೆ ಎಂದರೆ ಸರಿ. ಸದರಿ ಪಾಲುದಾರಿಕೆ ಒಪ್ಪಂದವನ್ನು ನಾನು ಎಲ್ಲೂ ಪ್ರಶ್ನಿಸಿಲ್ಲ. ಪಾಲುದಾರಿಕೆ ಒಪ್ಪಂದ ಪತ್ರದಲ್ಲಿ ಪ್ರಶಾಂತ ಹೊಟೇಲ ಕಬ್ಜಾ ಇದೆ. ಪಾಲುದಾರಿಕೆ ಸಂಸ್ಥೆಯ ಒಪ್ಪಂದದ ಪ್ರಕಾರ 1 ಮತ್ತು 4 ಪ್ರತಿವಾದಿಯರ ಕಬ್ಜಾದಲ್ಲಿ ಇದೆ ಎಂದರೆ ಸಾಕ್ಷಿಯು ನನ್ನ ಕಬ್ಜಾದಲ್ಲಿ ಇದೆ ಎಂದು ಹೇಳುತ್ತಾರೆ.

6. ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳ ಪ್ರಕಾರ ನಾನು ಪ್ರಶಾಂತ ಹೊಟೇಲ ಕಬ್ಜಾದಲ್ಲಿ ಇದ್ದೇನೆ. ಪ್ರಶಾಂತ ಹೊಟೇಲನ ಮಾಲೀಕರು 1 ಮತ್ತು 4 ನೇ ಪ್ರತಿವಾದಿಯರು ಎಂದರೆ ಸರಿಯಲ್ಲ. ಸದರಿ ದಾವಾ ಐಟಂ 1 ನೇ ಸ್ವತ್ತನ್ನು ಸುಶೀಲಾಬಾಯಿ ಮತ್ತು ಜಯವಂತ ಕಾಳೆ 1 ನೇ ಪ್ರತಿವಾದಿ ಒಟ್ಟಿಗೆ ಕೂಡಿ ಮಾಡಿದ್ದು ಎಂದರೆ ಸರಿಯಲ್ಲ. ಪ್ರಶಾಂತ ಹೊಟೇಲ ಜಾಗ ಖುಲ್ಲಾ ಇತ್ತು ಎಂದರೆ ಸರಿಯಲ್ಲ. ಸುಶೀಲಾಬಾಯಿ ಮತ್ತು 1 ನೇ ಪ್ರತಿವಾದಿ ಕಟ್ಟಡ ಕಟ್ಟುವ ಬಗ್ಗೆ ಕೆ.ಎಸ್.ಎಪ್.ಸಿಯಿಂದ ಸಾಲ ಪಡೆದಿದ್ದರೂ ಎಂದರೆ ಸಾಕ್ಷಿಯು ಸಾಲ ಮಾಡಿಕೊಂಡೆ ಮಾಡಿದ್ದರು ಎಂದು ಹೇಳುತ್ತಾರೆ. ಸಾಲದ ಹಣ 14 ಲಕ್ಷ. ಸಾಲದ ಹಣವನ್ನು 1 ನೇ ಪ್ರತಿವಾದಿ ಮರುಪಾವತಿ ಮಾಡಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷ್ಷಿಯು ಸುಶೀಲಾಬಾಯಿ ಅವರು ಮರುಪಾವತಿ ಮಾಡಿದ್ದಾರೆ ಎಂದು ಹೇಳುತ್ತಾರೆ.

7. ನಮ್ಮ ತಾಯಿ ಪ್ರತಿವಾದಿ-1 ರವರ ಮನೆಯಲ್ಲಿ ಜೋಪಾನ ಆಗಿದ್ದಾರೆ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯ ಮಾಲೀಕರು ಅಲ್ಲ ಮತ್ತು ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ. ಖೊಟ್ಟಿ ಕೇಸು ದಾಖಲ ಮಾಡಿಸಿದ್ದೇವೆ ಎಂದರೆ

ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ

ಸಾಕ್ಷಿಯ ಸಹಿ